# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ</u>

## <u>ಎಸ್.ಸಿ. ಸಂಖ್ಯೆ: 1/2020</u>

ಅ.ಸಾ. 12

ದೊ.ಸಾ. 02

| | | |
|---|---|---|
| ಸಾಕ್ಷಿಯ ಹೆಸರು | : | ರವಿ ಬಡಿಗೇರ |
| ತಂದೆ ಹೆಸರು | : | ರಾಮಚಂದ್ರ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಹಂಗರಕಿ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | : | 16/12/2021 |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ:</u>**

ಪ್ರಾಸಾ.9 ಈತನ ಪರಿಚಯವಿದೆ, ಆತ ನಮ್ಮ ಊರಿನವನು. ಪೊಲೀಸರು ನನ್ನನು ಪಂಚನಾಮೆ ಮಾಡಲು ಕರೆದಿರಲಿಲ್ಲ. ಸದರಿ ದಾಖಲೆಗೆ ಹಂಗರಕಿಯ ಹನಮಂತ ದೇವಸ್ಥಾನದ ಮುಂದೆ ಸಹಿ ಮಾಡಿದ್ದೇನೆ. ಸಾಕ್ಷಿಗೆ ಅಭಿಯೋಜಕರು ನಿಪಿ.9 ನ್ನು ತೋರಿಸಿದ್ದು, ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರ್ತಿಸಿದ್ದಾರೆ. ಅದರಲ್ಲಿರುವ ಸಾಕ್ಷಿಯ ಸಹಿಗೆ ಈ ಮೊದಲು ನಿಶಾನೆ.ಪಿ.9(ಎ) ಎಂದು ಗುರ್ತಿಸಲಾಗಿದೆ. ಸದರಿ ದಾಖಲೆಗೆ ಪೊಲೀಸರ ಹೇಳಿಕೆಯಂತೆ ಸಹಿ ಮಾಡಿದ್ದೇನೆ. ಪೊಲೀಸರು ನನ್ನನ್ನು ಬೇರೆ ಎಲ್ಲಿಗೂ ಕರೆದುಕೊಂಡು ಹೋಗಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ. ನಿಪಿ.9 ರಲ್ಲಿ ಬರೆದ ವಿಷಯಗಳನ್ನು ಪೊಲೀಸರು ನನಗೆ ಓದಿ ಹೇಳಿಲ್ಲ ಹಾಗೂ ಅದನ್ನು ಓದಿ ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಸಾಕ್ಷಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀಸವಾಲು ಸಾರ್ವಜನಿಕ ಅಭಿಯೋಜಕರಿಂದಃ**

2. ದಿಃ 16/02/2018 ರಂದು ಬೆಳಿಗ್ಗೆ 11.00 ಗಂಟೆಗೆ ಪೊಲೀಸರು ತನಿಖೆ ಮಾಡಲು ಹಂಗರಕಿ ಗ್ರಾಮ ಪಂಚಾಯಿತಿಯ ಕಚೇರಿಗೆ ಬಂದಿದ್ದರು ಅನ್ನುವದು ಸರಿಯಲ್ಲ. ಆ ದಿನ ಸಾಕ್ಷಿ ಪ್ರಾಸಾ.2 ರುದ್ರಪ್ಪ ಮುರಾರಿ ಸ್ಥಳದಲ್ಲಿ ಹಾಜರಿದ್ದ ಹಾಗೂ ನನ್ನಂತೆ ಪ್ರಾಸಾ.9 ಫಕೀರಪ್ಪ ನವಲಗುಂದ ಬಂದಿದ್ದ ಅನ್ನುವುದು ಸರಿಯಲ್ಲ. ಪೊಲೀಸರು ಪಂಚಾಯಿತಿ ಕಚೇರಿಯನ್ನು ಪರಿಶೀಲಿಸುವಾಗ ರುದ್ರಪ್ಪ ಅವರಿಗೆ ಜಾಗವನ್ನು ತೋರಿಸಿ, ಸ್ಥಳದಲ್ಲಿ ಬಿದ್ದಿದ್ದ ಹಾಗೂ ಅರ್ಧ ಮರ್ಧ ಸುಟ್ಟ ಫೈಲುಗಳನ್ನಿಟ್ಟ ರಟ್ಟಿನ ಬಾಕ್ಸನ್ನು ಹಾಜರಪಡಿಸಿದ ಅನ್ನುವುದು ಸರಿಯಲ್ಲ. ಪೊಲೀಸರು ಅವುಗಳನ್ನು ಪಡೆದುಕೊಂಡು ನಿಪಿ.9 ರಂತೆ ಮಹಜರನ್ನು ಬರೆದು, ನನಗೆ ಓದಿ ಹೇಳಿ, ಸ್ಥಳದಲ್ಲಿ ನನ್ನ ಸಹಿ ಪಡೆದಿದ್ದಾರೆ ಅನ್ನುವುದು ಸರಿಯಲ್ಲ. ಅದಕ್ಕೆ ನನ್ನ ಸಮಕ್ಷಮ ಪ್ರಾಸಾ.9 ಸಹಿ ಹಾಕಿದ್ದಾನೆ ಅನ್ನುವುದು ಸರಿಯಲ್ಲ. ಆ ದಿನ ಈಗ ನನಗೆ ತೋರಿಸಿದ ಮುಮಾ.1 ನ್ನು ಅಮಾನುತ್ತುಪಡಿಸಿಕೊಂಡಿದ್ದಾರೆ ಅನ್ನುವುದು ಸರಿಯಲ್ಲ.

3. ನನಗೆ ಸಂಪೂರ್ಣ ವಿಷಯಗಳು ಗೊತ್ತಿದ್ದರೂ ಸಹ ಆರೋಪಿ ನಮ್ಮ ಊರಿನವನೆಂದು, ಆತನಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀಸವಾಲು ಆರೋಪಿ ಪರವಾಗಿ ಶ್ರೀ. ಎನ್ ಹೆಚ್ ಟಿ ವಕೀಲರಿಂದಃ**

4. ಇಲ್ಲವೆಂದು ಹೇಳುತ್ತಾರೆ.

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

Sd/-

16/12/2021

**(ಉಮೇಶ ಎಂ ಅಡಿಗ)**

ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಧಾರವಾಡ.